# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಎಂ. ಸಲೀಂ ಪಾಷಾ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಪಂ.. ಹರಪನಹಳ್ಳಿ ಮತ್ತು ಶ್ರೀ ಆರ್. ಶಿಖರಪ್ಪ ಹಿಂದಿನ ಪ್ರಭಾರ ಪಿಡಿಓ ಮತ್ತು ಕಾರ್ಯದರ್ಶಿ ಮತ್ತಿಹಳ್ಳಿ ಗ್ರಾ.ಪಂ., ಹರಪ್ಪನಹಳ್ಳಿ ತಾಲ್ಲೂಕು, ಹಾಗೂ ಶ್ರೀ ಬಿ. ಎಸ್. ಕಲ್ಲಪ್ಪ, ಹಿಂದಿನ ಕಿರಿಯ ಇಂಜಿನಿಯರ್, ಮತ್ತಿಹಳ್ಳಿ ಗ್ರಾ.ಪಂ., ಹರಪ್ಪನಹಳ್ಳಿ ತಾಲ್ಲೂಕು ಇವರುಗಳ ವಿರುದ್ಧದ ಶಿಸ್ತುಕ್ರಮ-ಅಂತಿಮ ಆದೇಶದ ಬಗ್ಗೆ.

ಓದಲಾಗಿದೆ:1) ನಿರ್ದೇಶಕರು, ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ ಇವರ ಪರಿಶೀಲನಾ ವರದಿ ದಿನಾಂಕ: 20-12-2013

2) ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 232 ವಿಸೇಬಿ 2013 ದಿನಾಂಕ: 21-01-2014

3) ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ 232 ವಿಸೇಬಿ 2013 ದಿನಾಂಕ: 04-02-2014.

4) ಶ್ರೀ ಎಂ. ಸಲೀಂ ಪಾಷಾ, ಮತ್ತು ಶ್ರೀ ಆರ್. ಶಿಖರಪ್ಪ ಹಾಗೂ ಶ್ರೀ ಬಿ. ಎಸ್. ಕಲ್ಲಪ್ಪ, ಇವರ ಲಿಖಿತ ಹೇಳಿಕೆ ದಿನಾಂಕ: 18-02-2014. 10-02-2014.

5) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 232 ವಿಸೇಬಿ 2013 ದಿನಾಂಕ:05-02-2015

6) ವಿಚಾರಣಾಧಿಕಾರಿಯವರ ವಿಚಾರಣಾ ವರದಿ ದಿನಾಂಕ: 04-05-2015.

------

<u>ಪ್ರಸ್ತಾವನೆ:-</u>

ದಾವಣಗೆರೆ ಜಿಲ್ಲೆ ಹರಪ್ಪನಹಳ್ಳಿ ತಾಲ್ಲೂಕು ಮತ್ತಿಹಳ್ಳಿ ಗ್ರಾಮ ಪಂಚಾಯತಿಯಲ್ಲಿ 2013-14ನೇ ಸಾಲಿನ ಎಂಜಿಎನ್‌ಆರ್‌ಇಜಿಎ ಯೋಜನೆಯಲ್ಲಿ ಯಂತ್ರೋಪಕರಣಗಳನ್ನು ಬಳಸಿ ಕೆಲಸ ನಿರ್ವಹಿಸಿರುವ ಕುರಿತು ಶ್ರೀ ಮಲ್ಲಿಕಾರ್ಜುನಗೌಡ, ಶ್ರೀ ಬಸವರಾಜ್‌ಗೌಡ, ಶ್ರೀ ಕಾಡನಗೌಡ, ಮತ್ತಿಹಳ್ಳಿ ಗ್ರಾಮ ದಾವಣಗೆರೆ ಜಿಲ್ಲೆ ಇವರು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಗೆ ಸಲ್ಲಿಸಿರುವ ದೂರಿಗೆ ಸಂಬಂಧಿಸಿದಂತೆ ನಿರ್ದೇಶಕರು, ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ ಇವರು ಮತ್ತಿಹಳ್ಳಿ ಗ್ರಾಮ ಪಂಚಾಯತಿಗೆ ಭೇಟಿ ನೀಡಿ ತನಿಖೆ ನಡೆಸಿ ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ದಿನಾಂಕ: 20-12-2013 ರಂದು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ 2013-14ನೇ ಸಾಲಿನ ಎಂಜಿಎನ್‌ಆರ್‌ಇಜಿಎ ಯೋಜನೆಯಡಿಯಲ್ಲಿ ಹರಪ್ಪನಹಳ್ಳಿ ತಾಲ್ಲೂಕು ಮತ್ತಿಹಳ್ಳಿ ಗ್ರಾಮ ಪಂಚಾಯತಿಯಲ್ಲಿ ದನದ ಓಣಿ ದಾರಿಯಲ್ಲಿ ಚೆಕ್‌ಡ್ಯಾಂ ಕಾಮಗಾರಿ ಮತ್ತು ಗ್ರಾಮ ಪಂಚಾಯತಿ ಹಿಂಭಾಗವಿರುವ ಹುಬ್ಬಳ್ಳಿ ತಿಂದಪ್ಪನ ಕಣದಿಂದ ಮುದೇಡ್ರ ಕೆಂಚಪ್ಪನ ಹೊಲದವರೆಗೆ ನಿರ್ವಹಿಸಲಾದ ರಸ್ತೆ ನಿರ್ಮಾಣ ಕಾಮಗಾರಿಯಲ್ಲಿ ಯಂತ್ರೋಪಕರಣವನ್ನು ಬಳಸಿ ಕೆಲಸ ನಿರ್ವಹಿಸಿರುವ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳಲ್ಲಿ ಈ ಕೆಳಕಂಡ ಅಧಿಕಾರಿ/ನೌಕರರು ಭಾಗಿಯಾಗಿದ್ದು, ಸದರಿಯವರ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಮೇಲೆ (1) ರಲ್ಲಿ ಓದಲಾದ ದಿನಾಂಕ:20-12-2013 ರ ಪರಿಶೀಲನಾ ವರದಿಯಲ್ಲಿ ತಿಳಿಸಿರುತ್ತಾರೆ.

(1) ಶ್ರೀ ಎಂ. ಸಲೀಂ ಪಾಷಾ,ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಪಂ.. ಹರಪನಹಳ್ಳಿ

(2) ಶ್ರೀ ಆರ್.ಶಿಖರಪ್ಪ ಹಿಂದಿನ ಪ್ರಭಾರ ಪಿಡಿಓ ಮತ್ತು ಕಾರ್ಯದರ್ಶಿ ಮತ್ತಿಹಳ್ಳಿ ಗ್ರಾ.ಪಂ.. ಹರಪ್ಪನಹಳ್ಳಿ ತಾಲ್ಲೂಕು

(3) ಶ್ರೀ ಬಿ.ಎಸ್.ಕಲ್ಲಪ್ಪ, ಹಿಂದಿನ ಕಿರಿಯ ಇಂಜಿನಿಯರ್, ಮತ್ತಿಹಳ್ಳಿ ಗ್ರಾ.ಪಂ.. ಹರಪ್ಪನಹಳ್ಳಿ ತಾಲ್ಲೂಕು

ನಿರ್ದೇಶಕರು, ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ ರವರ ವರದಿಯನ್ನು ಪರಿಶೀಲಿಸಲಾಗಿ ಮೇಲ್ಕಂಡ ಅಧಿಕಾರಿ/ನೌಕರರು ಅವ್ಯವಹಾರದಲ್ಲಿ ಭಾಗಿಯಾಗಿರುವುದು ಮತ್ತು

60

ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಕಾರಣ ಅವರುಗಳ ವಿರುದ್ಧದ ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು ಮೇಲೆ ಕ್ರ.ಸಂ. 2 ರಲ್ಲಿ ಓದಲಾದ ದಿನಾಂಕ:21-01-2014 ರ ಆದೇಶದಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 10(1)(ಡಿ) ರಡಿ ಅಮಾನತ್ತುಗೊಳಿಸಲಾಗಿತ್ತು.

ತದನಂತರ ಮೇಲ್ಕಂಡ ಅಧಿಕಾರಿ/ನೌಕರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 11 ರಡಿ ಶಿಸ್ತು ಕ್ರಮ ಜರುಗಿಸಲು ಉದ್ದೇಶಿಸಿ ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಕಾರಣ ಕೇಳುವ ನೋಟೀಸಿನೊಂದಿಗೆ ದೋಷಾರೋಪಣಾ ಪಟ್ಟಿಯನ್ನು (ಅನುಬಂಧ 1 ರಿಂದ 4) ಜಾರಿ ಮಾಡಿ ಹದಿನೈದು ದಿನದೊಳಗಾಗಿ ರಕ್ಷಣಾ ಹೇಳಿಕೆ ಸಲ್ಲಿಸಲು ಸೂಚಿಸಲಾಗಿತ್ತು.

ಪ್ರತಿಯಾಗಿ ಸದರಿ ನೋಟೀಸಿಗೆ ಆರೋಪಿತ ಅಧಿಕಾರಿ/ನೌಕರರು ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಲಿಖಿತ ಹೇಳಿಕೆಗಳನ್ನು ಸಲ್ಲಿಸಿದ್ದು, ತಮ್ಮ ವಿರುದ್ಧದ ಆರೋಪಗಳನ್ನು ನಿರಾಕರಿಸಿ ಸೇವೆಗೆ ಪುನರ್ ಸ್ಥಾಪಿಸಬೇಕೆಂದು ಕೋರಿರುತ್ತಾರೆ. ಆರೋಪಿತ ಅಧಿಕಾರಿ/ನೌಕರರುಗಳ ವಿರುದ್ಧ ವಿಚಾರಣೆ ಬಾಕಿ ಇಟ್ಟು, ದಿನಾಂಕ:30-9-2014 ಹಾಗೂ ದಿನಾಂಕ:14-10-2014 ರ ತಿದ್ದುಪಡಿ ಆದೇಶಗಳಲ್ಲಿ ಸೇವೆಗೆ ಪುನರ್ ಸ್ಥಾಪಿಸಲಾಗಿದೆ. ಹಾಗೂ ಸದರಿಯವರುಗಳು ಸಲ್ಲಿಸಿರುವ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಲಾಗಿದ್ದು ಒಪ್ಪಲು ಸಮಂಜಸವಿರುವುದಿಲ್ಲ. ಆದ್ದರಿಂದ ಸದರಿ ಅಧಿಕಾರಿ/ ನೌಕರರುಗಳ ವಿರುದ್ಧ ಹೊರಿಸಲಾದ ಆರೋಪಗಳ ಸತ್ಯಾಸತ್ಯತೆಯನ್ನು ಕಂಡು ಹಿಡಿಯಲು ಜಂಟಿ ಇಲಾಖಾ ವಿಚಾರಣೆಯನ್ನು ಜರುಗಿಸಲು ಸರ್ಕಾರವು ನಿರ್ಧರಿಸಿ ಮೇಲೆ ಓದಲಾದ ಕ್ರಮ ಸಂಖ್ಯೆ (5) ರ ದಿನಾಂಕ 05-02-2015 ರ ಆದೇಶದಲ್ಲಿ ಶ್ರೀ ಎಂ. ಎಸ್. ಹೆಗ್ಡೆ ನಾಗ್ರೆ, ನಿವೃತ್ತ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರ ದಿನಾಂಕ 04-05-2015 ರಲ್ಲಿ ವಿಚಾರಣಾಧಿಕಾರಿಯವರು ಪ್ರಕರಣದ ಇಲಾಖೆ ವಿಚಾರಣೆ ನಡೆಸಿ ಕಾಮಗಾರಿಗಳ ಬಗ್ಗೆ ನಿಖರವಾದ ಸಾಕ್ಷಾಧಾರಗಳು ಲಭ್ಯವಿಲ್ಲದ ಕಾರಣ ಹಾಗೂ ಸದರಿ ವಿಷಯದ ಬಗ್ಗೆ ಸಮಗ್ರ ಚರ್ಚೆಯಿಂದಾಗಿ ಶಿಸ್ತು ಪ್ರಾಧಿಕಾರವು ಈ ಪ್ರಕರಣದಲ್ಲಿನ ವಿಷಯಗಳನ್ನು ಯಾವ ದೃಷ್ಟಿಕೋನದಿಂದ ನೋಡಿದರೂ ಅಗತ್ಯದ ರೀತಿಯಲ್ಲಿ ಪುರಾವೆ ಮಾಡಿಲಲ್ಲವೆಂಬುದು ನಿಚ್ಚಳವಾಗಿದೆ. ಆದಕಾರಣ ಅನಿವಾರ್ಯವಾಗಿ ನಕಾರಾತ್ಮಕ ನಿಲುವಿಗೆ ಬರಬೇಕಾಗಿದೆ ಎಂದು ತಿಳಿಸುತ್ತಾ ಯಾವುದೇ ಆರೋಪವು ಆಪಾದಿತ ಅಧಿಕಾರಿ ನೌಕರರ ವಿರುದ್ಧ ಪುರಾವೆ ಆಗಿಲ್ಲಲ್ಲವೆಂದು ವರದಿ ಮಾಡಿರುತ್ತಾರೆ.

ಸರ್ಕಾರವು ಆಪಾದಿತ ಅಧಿಕಾರಿ/ನೌಕರರ ವಿರುದ್ಧದ ಆರೋಪಗಳು ಮತ್ತು ವಿಚಾರಣಾ ವರದಿ ಹಾಗೂ ಸಂಬಂಧಿಸಿದ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ದಾವಣಗೆರೆ ತಾಲ್ಲೂಕು, ಮತ್ತಿಹಳ್ಳಿ ಗ್ರಾಮದ ಕರಿಯಪ್ಪನ ಹೊಲದ ಹತ್ತಿರ ಚೆಕ್ ಡ್ಯಾಂ ಪುನಶ್ಚೇತನಗೊಳಿಸಲು ಹಾಗೂ ಈ ಚೆಕ್ ಡ್ಯಾಂ ನ್ನು ಮಾನವ ಕೂಲಿ ಕಾರ್ಮಿಕರಿಂದ ಮಾಡಿಸಬೇಕಾಗಿದ್ದು ಯಂತ್ರೋಪಕರಣಗಳಿಂದ ಮಾಡಿಸಿರುತ್ತಾರೆಂಬ ಆಪಾದನೆ ಇದ್ದು ಆದರೆ ಸದರಿ ಕಾಮಗಾರಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತಿ ದಾವಣಗೆರೆ ರವರು ಅನುದಾನ ಬಿಡುಗಡೆ ಮಾಡಿಲ್ಲದ ಪ್ರಯುಕ್ತ ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟಾಗಿಲ್ಲದಿರುವುದರಿಂದ, 3 ಜನ ಆಪಾದಿತರ ಪೈಕಿ ಶ್ರೀ ಎಂ. ಸಲೀಂ ಪಾಷಾ,ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಪಂ., ಹರಪನಹಳ್ಳಿ ಮತ್ತು ಶ್ರೀ ಬಿ.ಎನ್.ಕಲ್ಲಪ್ಪ, ಹಿಂದಿನ ಕಿರಿಯ ಇಂಜಿನಿಯರ್, ಮತ್ತಿಹಳ್ಳಿ ಗ್ರಾ.ಪಂ., ಹರಪ್ಪನಹಳ್ಳಿ ತಾಲ್ಲೂಕು ಇವರುಗಳು ಈಗಾಗಲೇ ಸೇವೆಯಿಂದ ವಯೋನಿವೃತ್ತರಾಗಿರುವುದರಿಂದ ಅವರುಗಳನ್ನು ಆರೋಪದಿಂದ ಮುಕ್ತಗೊಳಿಸಲು ಮತ್ತು ಶ್ರೀ ಆರ್.ಶಿಖರಪ್ಪ ಹಿಂದಿನ ಪ್ರಭಾರ ಪಿಡಿಓ ಮತ್ತು ಕಾರ್ಯದರ್ಶಿ ಮತ್ತಿಹಳ್ಳಿ ಗ್ರಾ.ಪಂ., ಹರಪ್ಪನಹಳ್ಳಿ ತಾಲ್ಲೂಕು ಇವರು ಸರ್ಕಾರದ ವಿಧಿವಿಧಾನಗಳನ್ನು ಪೂರೈಸಿಲ್ಲದ ಕಾರಣ ಸದರಿ ನೌಕರರಿಗೆ ಎಚ್ಚರಿಕೆ ನೀಡಲು ಸರ್ಕಾರವು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 232 ವಿಸೇಬಿ 2013 ಬೆಂಗಳೂರು ದಿನಾಂಕ:23-06-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡ ಅಧಿಕಾರಿ/ನೌಕರರುಗಳಿಗೆ ಕ್ರಮಾಂಕ ಗ್ರಾಅಪ 232 ವಿಸೇಬಿ 2013 ದಿನಾಂಕ: 04-02-2014 ರ ಕಾರಣ ಕೇಳುವ ನೋಟೀಸಿನ ಜೊತೆ ಜಾರಿ ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ, ದೋಷಮುಕ್ತಗೊಳಿಸಿ ಆದೇಶಿಸಿದೆ.

(1) ಶ್ರೀ ಎಂ. ಸಲೀಂ ಪಾಷಾ,ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಪಂ., ಹರಪನಹಳ್ಳಿ

(2) ಶ್ರೀ ಬಿ.ಎನ್.ಕಲ್ಲಪ್ಪ, ಹಿಂದಿನ ಕಿರಿಯ ಇಂಜಿನಿಯರ್, ಮತ್ತಿಹಳ್ಳಿ ಗ್ರಾ.ಪಂ., ಹರಪ್ಪನಹಳ್ಳಿ ತಾಲ್ಲೂಕು

ಶ್ರೀ ಆರ್ .ಶಿಖರಪ್ಪ ಹಿಂದಿನ ಪ್ರಭಾರ ಪಿಡಿಓ ಮತ್ತು ಕಾರ್ಯದರ್ಶಿ ಮತ್ತಿಹಳ್ಳಿ ಗ್ರಾ.ಪಂ.,ಹರಪ್ಪನಹಳ್ಳಿ ತಾಲ್ಲೂಕು ಇವರಿಗೆ ಕ್ರಮಾಂಕ ಗ್ರಾಅಪ 232 ವಿಸೇಬಿ 2013 ದಿನಾಂಕ: 04-02-2014 ರ ಕಾರಣ ಕೇಳುವ ನೋಟೀಸಿನ ಜೊತೆ ಜಾರಿ ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ, ಇನ್ನು ಮುಂದೆ ತಮ್ಮ ಕರ್ತವ್ಯದ ಅವಧಿಯಲ್ಲಿ ಸರ್ಕಾರದ ವಿಧಿ ವಿಧಾನಗಳ ಅನ್ವಯ ಕರ್ತವ್ಯ ನಿರ್ವಹಿಸುವಂತೆ "ಎಚ್ಚರಿಕೆ ನೀಡಿ" ಆದೇಶಿಸಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ,**

23/6/2016

**(ಎಸ್. ರಂಗನಗೌಡ)**
**ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು ಬಿ&ಸಿ),**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.**

ಗೆ:

1. ಮಹಾಲೇಖಪಾಲರು, (ಎ&ಇ) ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ದಾವಣಗೆರೆ.
3. ಕಾರ್ಯಪಾಲಕ ಇಂಜಿನಿಯರ ಲೋಕೋಪಯೋಗಿ ಇಲಾಖೆ (ವಿಶೇಷ ವಿಭಾಗ), ಶಿವಮೊಗ್ಗ.
4. ಆಪಾದಿತ ಅಧಿಕಾರಿ/ನೌಕರರುಗಳಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ದಾವಣಗೆರೆ ಇವರ ಮುಖಾಂತರ)
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)/ಜಂಟಿ ಕಾರ್ಯದರ್ಶಿ (ಆಡಳಿತ), ಗ್ರಾ .ಅ. & ಪಂ.ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
6. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.